### ವಿಧಾನ ಪರಿಷತ್‌ನಲ್ಲಿ ನಡೆದಿದ್ದ ಗದ್ದಲ • ಮಧ್ಯಂತರ ವರದಿ ಮಂಡನೆ

# 3 ಸಚಿವರು, ಶಾಸಕರ ವಿರುದ್ಧ ಕ್ರಮಕ್ಕೆ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನಲ್ಲಿ ಡಿಸೆಂಬರ್ 15ರಂದು ನಡೆದ ಅಹಿತಕರ ಘಟನೆಗೆ ಸಂಬಂಧಿಸಿದಂತೆ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಸಚಿವರಾದ ಜೆ.ಸಿ. ಮಾಧುಸ್ವಾಮಿ, ಕೋಟ ಶ್ರೀನಿವಾಸ ಪೂಜಾರಿ, ಉಪ ಸಭಾಪತಿ ಎಂ.ಕೆ. ಪ್ರಾಣೇಶ್, ಸಭಾಪತಿ ಹುದ್ದೆಯ ನಿರೀಕ್ಷೆಯಲ್ಲಿರುವ ಜೆಡಿಎಸ್‌ನ ಬಸವರಾಜ ಹೊರಟ್ಟಿ ಸೇರಿದಂತೆ ಹಲವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮರಿತಿಬ್ಬೇಗೌಡ ನೇತೃತ್ವದ ಸದನ ಸಮಿತಿ ಶಿಫಾರಸು ಮಾಡಿದೆ.

ಮರಿತಿಬ್ಬೇಗೌಡ ನೇತೃತ್ವದಲ್ಲಿ ಬಿಜೆಪಿಯ ಎ.ಎಚ್. ವಿಶ್ವನಾಥ್, ಎಸ್.ವಿ. ಸಂಕನೂರ, ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಮತ್ತು ಆರ್.ಬಿ. ತಿಮ್ಮಾಪೂರ ಅವರನ್ನೊಳಗೊಂಡ ಸದನಸಮಿತಿಯನ್ನುಸಭಾಪತಿ ಕೆ.ಪ್ರತಾಪ ಚಂದ್ರ ಶೆಟ್ಟಿ ನೇಮಿಸಿದ್ದರು.

ವಿಶ್ವನಾಥ್ ಮತ್ತು ಸಂಕನೂರ ಸಮಿತಿಯ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿ, ದೂರ ಉಳಿದಿದ್ದರು. ಮೂವರು ಸದಸ್ಯರು ವಿಚಾರಣೆ ನಡೆಸಿದ್ದು, ಸಮಿತಿಯ ಮಧ್ಯಂತರ ವರದಿಯನ್ನು ಸದನದಲ್ಲಿ ಶುಕ್ರವಾರ ಮಂಡಿಸಲಾಯಿತು.

'ಅಹಿತಕರ ಘಟನೆಯಲ್ಲಿ ವಿಧಾನ ಪರಿಷತ್‌ನ ಕಾರ್ಯದರ್ಶಿ ಕೆ.ಆರ್. ಮಹಾಲಕ್ಷ್ಮಿ ಕೂಡ ತಪ್ಪೆಸಗಿರುವುದು ವಿಚಾರಣೆಯಲ್ಲಿ ದೃಢಪಟ್ಟಿದೆ. ಸದನ ಸಮಿತಿಯು ಅಂತಿಮ ವರದಿ ಸಲ್ಲಿಸುವವರೆಗೂ ಕಾರ್ಯದರ್ಶಿ ಸ್ಥಾನದಲ್ಲಿ ಅವರು ಕಾರ್ಯನಿರ್ವಹಿಸುವುದನ್ನು ನಿರ್ಬಂಧಿಸಬೇಕು. ಅವರ ಕರ್ತವ್ಯಲೋಪ ಮತ್ತು ಬೇಜವಾಬ್ದಾರಿ ನಡವಳಿಕೆ ಕುರಿತು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಯಿಂದ ವಿಚಾರಣೆ ನಡೆಸಬೇಕು' ಎಂದು ಸಮಿತಿ ಶಿಫಾರಸು ಮಾಡಿದೆ.

ಉಪ ಸಭಾಪತಿಯವರು ತಮ್ಮ ಆಸನದಲ್ಲಿ ಕುಳಿತುಕೊಂಡ ಬಳಿಕ ಅಲ್ಲಿಗೆ ತೆರಳಿ ಮಾತನಾಡಿದ್ದ ಕಾರ್ಯದರ್ಶಿ, ಸಭಾಪತಿ ಪೀಠ ಏರಿದ ಬಳಿಕವೂ ಅಲ್ಲಿಗೆ ಹೋಗಿ ದಾಖಲೆಗಳನ್ನು ಮೇಜಿನ ಮೇಲಿರಿಸಿ ಬಂದಿರುವುದು ವಿಡಿಯೊ ದೃಶ್ಯಾವಳಿಗಳಲ್ಲಿ ಸ್ಪಷ್ಟವಾಗಿ ದಾಖಲಾಗಿದೆ ಎಂದು ವರದಿ ಉಲ್ಲೇಖಿಸಿದೆ.

'ಉಪ ಸಭಾಪತಿಯಾಗಿದ್ದ ಎಸ್.ಎಲ್. ಧರ್ಮೇಗೌಡ ಅವರು ಕಾನೂನು ಬಾಹಿರವಾಗಿ ಸಭಾಪತಿ ಪೀಠವನ್ನು ಏರಲು ಮಾಧುಸ್ವಾಮಿ ಮತ್ತು ಅಶ್ವತ್ಥನಾರಾಯಣ ಪ್ರಚೋದನೆ ನೀಡಿದ್ದಾರೆ. ಸಭಾ ನಾಯಕ ಶ್ರೀನಿವಾಸ ಪೂಜಾರಿ ಅವರು ಅರುಣ್ ಶಹಾಪುರ ಅವರಿಗೆ ಕೈ ಸನ್ನೆ ಮೂಲಕ ಪ್ರಚೋದಿಸಿರುವುದು ಮತ್ತು ಉಪ ಸಭಾಪತಿಯವರ ಸೂಚನೆ ಮೇರೆಗೆ ಸದನದಲ್ಲಿ ಮಾಹಿತಿಯನ್ನು ಮಂಡಿಸುತ್ತಿರುವುದು ವಿಡಿಯೊ ದೃಶ್ಯಾವಳಿಗಳಲ್ಲಿ ಕಂಡುಬಂದಿದೆ. ಈ ಮೂವರೂ ಸರ್ಕಾರದ ಯಾವುದೇ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವುದು ಸೂಕ್ತವಲ್ಲ' ಎಂದು ಸದನ ಸಮಿತಿ ಹೇಳಿದೆ.

ಎಂ.ಕೆ. ಪ್ರಾಣೇಶ್, ವೈ.ಎ. ನಾರಾಯಣಸ್ವಾಮಿ ಮತ್ತು ಅರುಣ್ ಶಹಾಪುರ (ಬಿಜೆಪಿ) ಅವರು ಸಭಾಪತಿಯವರು ಸದನ ಪ್ರವೇಶಿಸದಂತೆ ಬಾಗಿಲಿಗೆ ಚಿಲಕ ಹಾಕಿರುವುದು ವಿಡಿಯೊ ದೃಶ್ಯಾವಳಿ ಹಾಗೂ ಮಾರ್ಷಲ್ ಸಿಬ್ಬಂದಿಯ ಹೇಳಿಕೆಯಿಂದ ದೃಢಪಟ್ಟಿದೆ. ಬಸವರಾಜ ಹೊರಟ್ಟಿ, ಕೆ.ಟಿ. ಶ್ರೀಕಂಠೇಗೌಡ ಮತ್ತು ಗೋವಿಂದ ರಾಜ್ (ಜೆಡಿಎಸ್) ಉಪ ಸಭಾಪತಿಯವರನ್ನು ನಿಯಮಬಾಹಿರವಾಗಿ ಸಭಾಪತಿಯವರ ಪೀಠದಲ್ಲಿ ಕೂರಿಸಿರುವುದು ದೃಢಪಟ್ಟಿದೆ. ನಂತರದಲ್ಲಿ ಪಕ್ಷದಲ್ಲಿದ್ದವರಿಗೆ ಹಿಂದೆ ಸರಿಯುವಂತೆ ಹೊರಟ್ಟಿ ಅವರು ಕೈ ಸನ್ನೆ ಮಾಡುತ್ತಿರುವುದೂ ದೃಶ್ಯಾವಳಿಯಲ್ಲಿದೆ. ಈ ಎಲ್ಲರನ್ನೂ ಮುಂದಿನ ಎರಡು ಅಧಿವೇಶನಗಳ ಅವಧಿಗೆ ಕಲಾಪದಲ್ಲಿ ಭಾಗವಹಿಸದಂತೆ ನಿರ್ಬಂಧಿಸಬೇಕು ಎಂದು ಸಮಿತಿ ಶಿಫಾರಸು ಮಾಡಿದೆ. ಸಚಿವ ಶ್ರೀನಿವಾಸ ಪೂಜಾರಿ ಅವರಿಗೂ ಎರಡು ಅಧಿವೇಶನಗಳಿಗೆ ನಿರ್ಬಂಧ ಹೇರಬೇಕೆಂಬ ಶಿಫಾರಸು ವರದಿಯಲ್ಲಿದೆ.

ಉಪ ಸಭಾಪತಿಯವರು ಪೀಠದಿಂದ ಎದ್ದ ಕೂಡಲೆ ಚಂದ್ರಶೇಖರ್ ಬಿ. ಪಾಟೀಲ್ ಸಭಾಪತಿಯವರ ಪೀಠದಲ್ಲಿ ಆಸೀನರಾಗಿರುವುದು ಕಂಡು ಬಂದಿದೆ. ಸದನದ ಬಾಗಿಲಿನ ಚಿಲಕ ತೆಗೆಯಲು ಮತ್ತು ಉಪ ಸಭಾಪತಿಯವರನ್ನು ಪೀಠದಿಂದ ಕೆಳಕ್ಕೆ ಎಳೆದು ತರುವುದರಲ್ಲಿ ನಜೀರ್ ಅಹ್ಮದ್, ವಿರೋಧ ಪಕ್ಷದ ಮುಖ್ಯ ಸಚೇತಕ ಎಂ. ನಾರಾಯಣ ಸ್ವಾಮಿ, ಶ್ರೀನಿವಾಸ ವಿ. ಮಾನೆ ಮತ್ತು ಪ್ರಕಾಶ್ ರಾಥೋಡ್ (ಕಾಂಗ್ರೆಸ್) ಭಾಗಿಯಾಗಿರುವುದು ದೃಢಪಟ್ಟಿದೆ. ಈ ಐವರನ್ನೂ ಮುಂದಿನ ಒಂದು ಅಧಿವೇಶನದ ಅವಧಿಗೆ ಕಲಾಪದಲ್ಲಿ ಭಾಗವಹಿಸದಂತೆ ನಿರ್ಬಂಧಿಸಬೇಕು ಎಂದು ಶಿಫಾರಸು ಮಾಡಲಾಗಿದೆ.

ಬೆಂಗಳೂರು: ಸಚಿವರ ಖಾತೆ ಗಳ ಹಂಚಿಕೆಯಲ್ಲಿ ಆದ ಗೊಂದಲದಿಂದ ಮುಖ್ಯಮಂತ್ರಿ ಮತ್ತು ಸರ್ಕಾರದ ವರ್ಚಸ್ಸಿಗೆ ಧಕ್ಕೆ ಆಗಿದೆ ಎಂದು ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಹೇಳಿದ್ದಾರೆ.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಯಾವುದೇ ಕಾರಣಕ್ಕೂ ಸರ್ಕಾರಕ್ಕೆ ಮುಜುಗರ ಆಗಬಾರದು. ಮುಂದಿನ ಎರಡು ವರ್ಷ ಸ್ಥಿರ ಆಡಳಿತ ಇರಬೇಕು ಎಂಬುದು ನಮ್ಮ ಅಪೇಕ್ಷೆ' ಎಂದರು.

'ವಲಸೆ ಬಂದವರು ಇಂಥದ್ದೇ ಖಾತೆಗಳನ್ನು ನೀಡ ಬೇಕು ಎಂದು ಪಟ್ಟು ಹಿಡಿದರು. ಕೆಲವರಿಗೆ 2–3 ಖಾತೆಗಳನ್ನು ನೀಡಲಾಯಿತು. ಪಕ್ಷಕ್ಕೆ ಕೆಲಸ ಮಾಡಿದವರು ನಾವು, ಅಧಿಕಾರ ಅನುಭವಿಸುವವರು ಅವರು' ಎಂದು ರೇಣುಕಾಚಾರ್ಯ ಅಸಮಾಧಾನ ವ್ಯಕ್ತಪಡಿಸಿದರು.

'ಇನ್ನು ಮುಂದೆ ನಾನು ಬಹಿರಂಗವಾಗಿ ಹೆಚ್ಚು ಮಾತನಾಡುವುದಿಲ್ಲ. ಏನು ಹೇಳ ಬೇಕಿದ್ದರೂ ಅದನ್ನು ಶಾಸಕಾಂಗ ಪಕ್ಷದ ಸಭೆಯಲ್ಲೇ ಹೇಳುತ್ತೇನೆ' ಎಂದು ಅವರು ತಿಳಿಸಿದರು.